ಮಳೆಗಾಲದಲ್ಲಿ ಈ ಶಿಕ್ಷಕಿ ಸೊಂಟದ ಮಟ್ಟದ ನೀರನ್ನು ದಾಟಿ ಸರಿಯಾದ ಸಮಯಕ್ಕೆ ಶಾಲೆಗೆ ಬರುತ್ತಾರೆ

ಮಧುಲಿಕಾ ತಪ್ಲಿಯಾಲ್

ಪ್ರಾಥಮಿಕ ಶಾಲೆ, ಗಮ್‌ದಿದ್‌ಗಾಂವ್, ಬಟ್‌ವಾರಿ ಬ್ಲಾಕ್
ಉತ್ತರಕಾಶಿ ಜಿಲ್ಲೆ, ಉತ್ತರಾಖಂಡ್

ಗಮ್‌ದಿದ್‌ಗಾಂವ್ ಮುಖ್ಯರಸ್ತೆಯಿಂದ ಸುಮಾರು ಎರಡು ಕಿಲೋಮೀಟರ್ ದೂರದ ಬೆಟ್ಟದ ಮೇಲಿರುವ ಒಂದು ಹಳ್ಳಿ. ಮಳೆಯ ದಿನಗಳಲ್ಲಿ ಮೋಡಗಳು ಶಾಲಾ ಕಟ್ಟಡದ ಸೂರನ್ನು ಸವರಿಕೊಂಡೇ ಹೋಗುವುದನ್ನು ನೋಡಬಹುದು. ಆ ಹಳ್ಳಿಯ ಸುಮಾರು ಐನೂರರಷ್ಟು ಜನಸಂಖ್ಯೆ ಎರಡು ಮೂರು ಬಸ್ತಿ ಸಮೂಹಗಳಲ್ಲಿ ಹಂಚಿ ಹೋಗಿದೆ. ಆರರಿಂದ ಹನ್ನೊಂದರ ವಯೋಮಾನದ ಇಪ್ಪತ್ತು ಹುಡುಗರು ಮತ್ತು ಹತ್ತೊಂಬತ್ತು ಹುಡುಗಿಯರು ಗಮ್‌ದಿದ್‌ಗಾಂವ್ ಪ್ರಾಥಮಿಕ ಶಾಲೆಯಲ್ಲಿ ನೋಂದಾಯಿತರಾಗಿದ್ದಾರೆ. ಸುಮಾರು ಹತ್ತರಿಂದ ಹನ್ನೆರಡು ಮಕ್ಕಳು ಖಾಸಗಿ ಶಾಲೆಗೆ ಹೋಗುತ್ತಾರೆ. ಗಮ್‌ದಿದ್‌ಗಾಂವ್ ಪ್ರಾಥಮಿಕ ಶಾಲೆಯಲ್ಲಿ ಮೂರು ತರಗತಿ ಕೋಣೆಗಳು ಇವೆ. ಮಧುಲಿಕಾ ತಪ್ಲಿಯಾಲ್ ಅಲ್ಲಿನ ಮುಖ್ಯ ಶಿಕ್ಷಕಿ. ಪವಿತ್ರಾ ರಾವತ್ ಅವರಿಗೆ ಸಹಾಯಕಿಯಾಗಿದ್ದಾರೆ. ಈ ಇಬ್ಬರು ಮಹಿಳೆಯರು ಎಲ್ಲ ತರಗತಿಗಳಿಗೂ ಬೋಧಿಸುತ್ತಿದ್ದು ವಿವಿಧ ವಿಷಯಗಳನ್ನು ತಮ್ಮೊಳಗೆ ಹಂಚಿಕೊಂಡಿದ್ದಾರೆ.

ಮಧುಲಿಕಾ ಹಿಂದಿ ಭಾಷೆಯಲ್ಲಿ ಎಂ.ಎ. ಮುಗಿಸಿದ್ದು ಶಿಕ್ಷಕ ತರಬೇತಿಯನ್ನೂ ಪಡೆದು ಬಿ.ಟಿ.ಸಿ. (ಬೇಸಿಕ್ ಟೀಚಿಂಗ್ ಸರ್ಟಿಫಿಕೇಟ್) ಹೊಂದಿದ್ದಾರೆ. ಅವರು ಭಟ್ವಾರಿ ಬ್ಲಾಕ್‌ನಲ್ಲಿಯೇ ಮೂಷಿಕ್‌ಸೌರ್‌ನ ಪ್ರಾಥಮಿಕ ಶಾಲೆಯಲ್ಲಿ 1993ರಲ್ಲಿ ಸೇವೆ ಪ್ರಾರಂಭಿಸಿದರು. ಅಲ್ಲಿ ಅವರು ಹದಿಮೂರು ವರ್ಷ ಸೇವೆಯಲ್ಲಿದ್ದು ನಂತರ ಗಮ್‌ದಿದ್‌ಗಾಂವ್ ಶಾಲೆಗೆ ಬಂದರು. ಇಲ್ಲಿ ಹನ್ನೊಂದು ವರ್ಷಗಳಿಂದ ಇದ್ದಾರೆ. ಮೂಷಿಕ್‌ಸೌರ್ ಶಾಲೆ ಈಗ ಒಂದು ಮಾದರಿ ಶಾಲೆ ಎನಿಸಿರುವುದರ ಹಿಂದೆ ಮಧುಲಿಕಾ ಅವರ ಶ್ರಮದ ಹೆಜ್ಜೆ ಗುರುತುಗಳನ್ನು ಕಾಣಬಹುದು. ಗಮ್‌ದಿದ್‌ಗಾಂವ್‌ನಲ್ಲಿ ಅವರು ಸಮುದಾಯದೊಡನೆಯೂ ಶಾಲಾ ಉಸ್ತುವಾರಿ ಸಮಿತಿಯೊಡನೆಯೂ ಉತ್ತಮ ಬಾಂಧವ್ಯವನ್ನು ಸಾಧಿಸಿದ್ದಾರೆ. ಶಾಲಾ ಉಸ್ತುವಾರಿ ಸಮಿತಿಯ ಅಧ್ಯಕ್ಷ ಶರದ್ ಸಿಂಗ್ ನೇಗಿ ಅವರು ಶಾಲೆಯ ಅಭಿವೃದ್ಧಿ ಬಗ್ಗೆ ಕಾಳಜಿ ಹೊಂದಿದ್ದು ಹೊಲದಲ್ಲಿ ಕೆಲಸವಿಲ್ಲದ ವೇಳೆಯಲ್ಲಿ ಶಾಲೆಯಲ್ಲಿ ಇರುತ್ತಾರೆ. ಮಕ್ಕಳಿಗೆ ಕಂಪ್ಯೂಟರ್‌ನ ಪರಿಚಯವಾಗಬೇಕೆಂಬ ಉದ್ದೇಶದಿಂದ ಗೂಂಜ್‌ನ ಸರಕಾರೇತರ ಸೇವಾ ಸಂಸ್ಥೆಯಿಂದ ಒಂದು ಡೆಸ್ಕ್‌ಟಾಪ್ ಕಂಪ್ಯೂಟರ್ ದೇಣಿಗೆಯಾಗಿ ಕೊಡಿಸಿದರು. ಅಲ್ಲದೆ ನಾಲ್ಕು ಹಾಗೂ ಐದನೇ ತರಗತಿ ಮಕ್ಕಳಿಗೆ ಕಂಪ್ಯೂಟರ್‌ನ ಮೂಲ ಪಾಠಗಳನ್ನು ಕಲಿಸಲು ಶಾಲಾ ಉಸ್ತುವಾರಿ ಸಮಿತಿಯ ವತಿಯಿಂದ ಊರಿನ ಒಬ್ಬ ಯುವ ಸ್ವಯಂಸೇವಕನನ್ನು ನಿಯೋಜಿಸಿದರು. ಈ ಕೊಡುಗೆಯ ಮೌಲ್ಯದ ವಿಷಯ ಏನೇ ಇರಲಿ– ತಮ್ಮ ಹಳ್ಳಿಯ ಮಕ್ಕಳಿಗೆ

ಕಲಿಕೆಯ ಆಧುನಿಕ ಸೌಲಭ್ಯಗಳನ್ನು ಕೊಡಿಸಬೇಕೆಂಬ ಶಾಲಾ ಉಸ್ತುವಾರಿ ಸಮಿತಿಯ ಕಳಕಳಿ ಮೆಚ್ಚತಕ್ಕದ್ದಾಗಿದೆ.

ಮಧುಲಿಕಾ ಅವರು ಗಳಿಸಿರುವ ಈ ಬೆಂಬಲ ಅವರು ಆ ಊರಿನ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೊಂದಿರುವ ಬದ್ಧತೆಗೆ ಜನ ತೋರಿಸಿರುವ ಒಂದು ಬಗೆಯ ಕೃತಜ್ಞತೆಯಾಗಿದೆ. ಮಧುಲಿಕಾ ಅವರ ವಾಸ ದೂರದ ಕಚ್ಚೇದೇವಿ ಎಂಬ ಊರಿನಲ್ಲಿ. ಅವರು ಮುಂಜಾನೆ ನಾಲ್ಕಕ್ಕೇ ಎದ್ದು ಮನೆಯವರಿಗೆಲ್ಲ ಅಡುಗೆ ಮಾಡಿಟ್ಟು ಆರೂಮುಕ್ಕಾಲರ ವೇಳೆಗೆ ಬಸ್ ತಂಗುದಾಣದಲ್ಲಿ ಇರುತ್ತಾರೆ. ಬಸ್ ಅವರನ್ನು ಗಮ್‌ದಿದ್‌ಗಾಂವ್‌ನ ಹತ್ತಿರದ ತಂಗುದಾಣದಲ್ಲಿ ಇಳಿಸಿ ಹೋಗುತ್ತದೆ. ಅಲ್ಲಿ ಅವರು ಆಟೊರಿಕ್ಷಾ ಹಿಡಿದು ಗಮ್‌ದಿದ್‌ಗಾಂವ್ ಬೆಟ್ಟದ ತಪ್ಪಲಿಗೆ ಬರುತ್ತಾರೆ. ವಾಹನ ಹೋಗುವ ರಸ್ತೆ ಅಲ್ಲಿ ಕೊನೆಗೊಳ್ಳುತ್ತದೆ. ಈ ಆಟೊ ಪ್ರಯಾಣಕ್ಕೆ ಅವರು ತಿಂಗಳಿಗೆ ಎರಡು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ತಪ್ಪಲಿನಿಂದ ಬೆಟ್ಟವನ್ನೇರಿ ಎರಡು ಕಿಲೋಮೀಟರ್ ನಡೆದು ಹೋಗಬೇಕು. ಅದು ಹಳ್ಳ–ಕೊಳ್ಳಗಳ ದಾರಿ. ಈ ಬೆಟ್ಟದ ದಾರಿಯ ಪಯಣದ ಕಷ್ಟ ಅನುಭವಿಸಿದವರಿಗಷ್ಟೇ ಗೊತ್ತು. ಭರ್ಜರಿ ಮಳೆ ಬಂದರೆ ಕೆಲವೊಮ್ಮೆ ಅವರು ಸೊಂಟಮಟ್ಟದ ನೀರು ಹರಿಯುವ ಹಳ್ಳವನ್ನು ದಾಟಿ ಹೋಗಬೇಕು. ಅಂಥ ಸಂದರ್ಭದಲ್ಲಿ ಅವರು ಮರದ ಒಣ ಕೊಂಬೆಯನ್ನು ಹಿಡಿದು ಊರುಗೋಲಾಗಿ ಬಳಸಿ ನೀರನ್ನು ದಾಟುತ್ತಾರೆ. ಬೆಳಿಗ್ಗೆ 7.45ರ ವೇಳೆಗೆ ಮಧುಲಿಕಾ ಶಾಲೆಯಲ್ಲಿ ಇರುತ್ತಾರೆ. ಮಳೆಯೋ ಮತ್ತೊಂದೋ ಕಾರಣಕ್ಕೆ ಅವರು ಎಂದೂ ಶಾಲೆ ತಪ್ಪಿಸಿಕೊಂಡದ್ದು ಇಲ್ಲ. ಆದರೆ ಅವರು ಸಮುದಾಯಕ್ಕೆ ಪ್ರೀತಿಪಾತ್ರರಾದುದಕ್ಕೆ ಕಾರಣ ಇದೊಂದೇ ಅಲ್ಲ.

ಮಧುಲಿಕಾ ವಿನಯಶೀಲೆ. "ನೀವು ಹೇಗೆ ಇಷ್ಟು ಒಳ್ಳೆಯ ಶಿಕ್ಷಕಿ ಆದಿರಿ?" ಎಂದು ಯಾರಾದರೂ ಅವರನ್ನು ಸಲಿಗೆಯಿಂದ ಕೇಳಿದರೆ ಆ ಹೊಗಳಿಕೆಯನ್ನು ಬದಿಗೆ ಸರಿಸುತ್ತಾರೆ. "ನಾನು ವಿಶೇಷವಾದುದೇನನ್ನೂ ಮಾಡುತ್ತಿಲ್ಲ" ಎಂದಷ್ಟೆ ಉತ್ತರಿಸುತ್ತಾರೆ. ಅವರು ತರಗತಿಯಲ್ಲಿ ಪಾಠ ಮಾಡುವುದನ್ನು ನೋಡಿದವರಿಗೆ ಅವರು ಪ್ರತಿಯೊಂದು ಮಗುವಿನ ಕುರಿತೂ ಕಾಳಜಿ ವಹಿಸುವುದು ಕಾಣಿಸುತ್ತದೆ. ಕಲಿಸುವುದರಲ್ಲಿ ತುಂಬಾ ಸಮರ್ಥರು ಹಾಗೂ ಪರಿಣತರು ಎಂಬುದು ಕೂಡಲೇ ಮನವರಿಕೆಯಾಗುತ್ತದೆ. ತರಗತಿಯಲ್ಲಿ ಸುತ್ತಾಡುತ್ತ ಪ್ರತಿ ಮಗುವನ್ನೂ ಗಮನಿಸುತ್ತ ಇರುತ್ತಾರೆ. ಅವರ ಏಕಾಗ್ರತೆಯೂ ಚೈತನ್ಯವೂ ಅಸದಳವಾದದ್ದು. ತರಗತಿಯಲ್ಲಿ ಮಕ್ಕಳು ನಿರಾಳವಾಗಿ ಇರುತ್ತಾರೆ. ಆ ಶಾಲೆಯಲ್ಲಿ ತುಂಬಾ ಮಳೆಯ ದಿನವೂ ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ಒಟ್ಟು 39ರಲ್ಲಿ 36 ಮಕ್ಕಳು ಹಾಜರಿರುತ್ತಾರೆ. ಆ ಮಕ್ಕಳಿಗೆ ಶಾಲೆಯೆಂದರೆ ಹಬ್ಬವೇ; ಅವರೆಂದೂ ಅದನ್ನು ತಪ್ಪಿಸಿಕೊಳ್ಳಲಾರರು. ಈ ಮಕ್ಕಳಲ್ಲಿ ಹಲವರು ಸೋದರ ಸಂಬಂಧಿಗಳು; ಇದೂ ಕೂಡಾ ತಮ್ಮ ಶಾಲೆಯ ಹಾಜರಿ ಜಾಸ್ತಿ ಇರಲು ಕಾರಣ ಎಂದು ಮಧುಲಿಕಾ ಭಾವಿಸುತ್ತಾರೆ. ಆಂಧ್ರಪ್ರದೇಶದ ಮದನಪಲ್ಲಿಯ ರಿಷಿವ್ಯಾಲಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ರಿಸೋರ್ಸ್‌ಸ್ ಅಭಿವೃದ್ಧಿಪಡಿಸಿದ ಬಹು ವರ್ಗದ ಹಾಗೂ ಬಹು ಹಂತದ ಬೋಧನ ಪದ್ಧತಿಯನ್ನು ನೋಡಿ ಕಲಿತು ಬರಲು

ಉತ್ತರಾಖಂಡ ಸರ್ಕಾರವು 2010ರಲ್ಲಿ ಪ್ರತಿ ಜಿಲ್ಲೆಯಿಂದಲೂ 20 ಶಿಕ್ಷಕರನ್ನು ಆಯ್ಕೆಮಾಡಿ ಕಳಿಸಿತು. ಚಟುವಟಿಕೆ ಆಧರಿತವಾದ ಈ ಕಲಿಕಾ ಪದ್ಧತಿಯು ರಾಜ್ಯದಲ್ಲಿ ನಿಧಾನವಾಗಿಯಾದರೂ ಬೇರೂರಿ ಪ್ರಾಥಮಿಕ ಶಿಕ್ಷಣವು ಹೆಚ್ಚು ಅರ್ಥಪೂರ್ಣವಾದೀತೆಂಬ ನಿರೀಕ್ಷೆ ಸರ್ಕಾರಕ್ಕೆ ಇತ್ತು; ಆದರೆ ಅದು ಬಹುತೇಕ ಹುಸಿಯಾಯಿತು. ರಿಷಿವ್ಯಾಲಿಗೆ ಹೋಗಿ ಬಂದವರಲ್ಲಿ ಬೆರಳೆಣಿಕೆಯ ಮಂದಿ ಮಾತ್ರ ಆ ಪದ್ಧತಿಯನ್ನು ಅರ್ಥಮಾಡಿಕೊಂಡು ತಮ್ಮ ತರಗತಿಗಳಲ್ಲಿ ಜಾರಿಗೆ ತಂದರು. ಅಂತಹವರಲ್ಲಿ ಮಧುಲಿಕಾ ಒಬ್ಬರು. ಮದನಪಲ್ಲಿಯ ರಿಷಿವ್ಯಾಲಿಯಲ್ಲಿ ಕಲಿತ ವಿಷಯ ತಮ್ಮ ಮೇಲೆ ಗಾಢವಾದ ಪರಿಣಾಮ ಉಂಟುಮಾಡಿತು ಎಂದು ಅವರು ಹೇಳುತ್ತಾರೆ. ಹಿಂದೆ ತಾವು ಎಷ್ಟೇ ಪರಿಶ್ರಮ ಪಟ್ಟರೂ ತರಗತಿಯಲ್ಲಿ ಕೆಲವು ಮಕ್ಕಳು ಪಾಠದಲ್ಲಿ ಆಸಕ್ತಿ ಕಳೆದುಕೊಂಡು ಅನ್ಯಮನಸ್ಕರಾಗಿ ಕಲಿಕೆಯಲ್ಲಿ ಹಿಂದೆ ಬೀಳುತ್ತಿದ್ದರು. ರಿಷಿವ್ಯಾಲಿಯಿಂದ ಬಂದ ಮೇಲೆ ಹೊಸ ಪದ್ಧತಿಯನ್ನು ಅನುಸರಿಸತೊಡಗಿದರು. ಮಕ್ಕಳು ನಿಧಾನವಾಗಿ ಪಾಠದಲ್ಲಿ ಆಸಕ್ತರಾಗಿ ತಾವಾಗಿಯೇ ಕಲಿಯತೊಡಗಿದರು. ಇಡೀ ತರಗತಿ ಹೀಗೆ ಕಲಿಕೆಯಲ್ಲಿ ತೊಡಗಿದುದನ್ನು ಮಧುಲಿಕಾ ಗಮನಿಸಿದರು. ಸಹಪಾಠಿ ಕಲಿಯುವುದನ್ನು ನೋಡಿ ಪಕ್ಕದವನೂ ಕಲಿಯಲು ಪ್ರಾರಂಭಿಸಿದ ವಿದ್ಯಮಾನವನ್ನು ಅವರು ಗುರುತಿಸಿದರು. ಮಕ್ಕಳು ಸ್ವತಂತ್ರವಾಗಿ ಕಲಿಯುವುದಕ್ಕೆ ಈ ಪದ್ಧತಿ ಪ್ರೇರಣೆ ನೀಡುವುದೆಂಬುದು ಅವರ ಅಭಿಪ್ರಾಯವಾಗಿದೆ. ಈ ಪದ್ಧತಿಯನ್ನು ಪ್ರಯೋಗಕ್ಕೆ ಒಡ್ಡಲು ಹೆಚ್ಚಿನ ಪರಿಣತಿ ಹಾಗೂ ಪರಿಶ್ರಮ ಅಗತ್ಯ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ; ಮುಖ್ಯವಾಗಿ ಶಿಕ್ಷಕರ ದೃಷ್ಟಿಯೂ ಬುದ್ಧಿಯೂ ಚುರುಕಾಗಿರಬೇಕು, ಗುಂಪಿನಿಂದ ಗುಂಪಿಗೆ ಚುರುಕಾಗಿ ಸಾಗಿ ಕೆಲಸ ಮಾಡಿಸುವ ಪಟುತ್ವ ಇರಬೇಕಾಗುತ್ತದೆ.

ಗಮ್‌ದಿದ್‌ಗಾಂವ್‌ನಂತಹ ದುರ್ಗಮ ಹಳ್ಳಿಯ ಮೊದಲನೇ ಪೀಳಿಗೆಯ ವಿದ್ಯಾರ್ಥಿಗಳ ನೈಜ ಕಲಿಕೆಯ ಸೂಚನೆಗಳು ಹೊರಗೆ ಕಾಣಿಸಿಕೊಳ್ಳುವುದು ಪ್ರಾಸಂಗಿಕವಾಗಿ ಮಾತ್ರ. ಅವರು ತಮ್ಮ ಶಿಕ್ಷಕರೊಂದಿಗೆ ವಿಷಯಗಳನ್ನು ಮುಕ್ತವಾಗಿ ಚರ್ಚಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದೇ ಈ ಸೂಚನೆಯ ಇನ್ನೊಂದು ಸ್ಪಷ್ಟವಾದ ರೂಪವಾಗಿದೆ. ಅದನ್ನು ನಾವು ಅಲ್ಲಿ ನೋಡಿದೆವು. ಆ ಶಾಲೆಯ ಅಂಗಳದಲ್ಲಿ ಒಂದು ಕರಿಹಲಗೆ ಇದ್ದು ಅದರಲ್ಲಿ "ದಿನದ ವಾರ್ತೆ" ಬರೆಯುತ್ತಾರೆ. ತಮಗೆ ಮಹತ್ವದ್ದು ಎಂದು ಅನಿಸಿದ ಸುದ್ದಿಗಳನ್ನುನಾಲ್ಕು ಹಾಗೂ ಐದನೇ ತರಗತಿಯ ವಿದ್ಯಾರ್ಥಿಗಳು ಅಲ್ಲಿ ಬರೆಯುತ್ತಾರೆ. ಮಳೆ ಸುರಿಯುತ್ತಿದ್ದ ಆ ದಿನ ಆ ಹಲಗೆಯಲ್ಲಿ ಮಕ್ಕಳು ಹೀಗೆ ಬರೆದಿದ್ದರು, "ಈ ದಿನ ಶಿವರಾಜನ ತಂದೆಯವರು ಡೆಹ್ರಾಡೂನ್‌ನಿಂದ ಬರುತ್ತಾರೆ." ಆ ಗ್ರಾಮದವರಿಗೆ ಆ ವಾರ್ತೆ ಮಹತ್ವದ್ದೇ ಸರಿ. ಅದನ್ನು ಮಕ್ಕಳು ಸರಿಯಾಗಿಯೇ ಆರಿಸಿ ಬರೆದಿದ್ದರು. ಇದರ ಕೆಳಗೆ ಇನ್ನೊಂದು ಸಾಲಿನಲ್ಲಿ ಇನ್ನೊಬ್ಬ ವಿದ್ಯಾರ್ಥಿ ತನ್ನ ಕೈಬರಹದಲ್ಲಿ ಹೀಗೆ ಬರೆದಿದ್ದ: "ಪಂಕಜ್‌ನ ಮುತ್ತಜ್ಜಿ ತುಂಬಾ ಅಸ್ವಸ್ಥರಾಗಿದ್ದಾರೆ." ಇವೆರಡೂ ವಿಷಯಗಳು ಆ ಊರಿನ ಜನರಿಗೆ ಸುದ್ದಿ ಎಂಬುದರ ಜೊತೆಗೆ ಅವರಲ್ಲಿ ಇರುವ ಪರಸ್ಪರ ಕಳಕಳಿಯನ್ನೂ ಸೂಚಿಸುತ್ತದೆ. ಮಕ್ಕಳು ಕರಿಹಲಗೆಯಲ್ಲಿ ಬರೆಯುವ ವಿಚಾರಗಳು ಅವರ ಅಭಿವ್ಯಕ್ತಿಯ ಸಾಮರ್ಥ್ಯವನ್ನು

ತೋರಿಸುತ್ತವೆ ಎಂದು ಮಧುಲಿಕಾ ಭಾವಿಸುತ್ತಾರೆ. ಅಲ್ಲದೆ ಶಾಲೆಯು ಮಕ್ಕಳಲ್ಲಿ ಯಾವ ರೀತಿಯ ಮೌಲ್ಯಗಳನ್ನು ಪಡಿಮೂಡಿಸುತ್ತಿದೆ ಎಂಬುದರ ಸೂಚಕವೂ ಆಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಫೌಂಡೇಷನ್ ಉತ್ತರಕಾಶಿಯಲ್ಲಿನ ಜಿಲ್ಲಾ ಸಂಸ್ಥೆಯ ಸದಸ್ಯರು 2005ರಿಂದಲೂ ಜಿಲ್ಲೆಯ ಶಿಕ್ಷಕರೊಂದಿಗೆ ದೀರ್ಘಕಾಲದ ಸಂಬಂಧವನ್ನು ಹೊಂದಿದ್ದಾರೆ. ಅಂದು ಅಲ್ಲಿನ ಒಟ್ಟು ಪ್ರಾಥಮಿಕ ಶಾಲೆಗಳಲ್ಲಿ ಅರ್ಧದಷ್ಟು ಶಾಲೆಗಳು ಕಲಿಕೆ ಖಾತರಿ (ಎಲ್‌ಜಿಪಿ) ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು. ಫೌಂಡೇಷನ್‌ನ ಸದಸ್ಯರು ಅಂದಿನಿಂದಲೂ ಗಮ್‌ದಿದ್‌ಗಾಂವ್ ಪ್ರಾಥಮಿಕ ಶಾಲೆಯೊಂದಿಗೂ ನಿಕಟ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಮಧುಲಿಕಾ ಅವರು ಸಾಮರ್ಥ್ಯ ನಿರ್ಮಾಣದ ಕಾರ್ಯಾಗಾರಗಳು ಹಾಗೂ ಇತರೇ ಶಿಕ್ಷಕರ ಕಲಿಕಾ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಗೃಹಕೃತ್ಯದ ಜವಾಬ್ದಾರಿಗಳಿದ್ದರೂ ಬಿಡುವು ಮಾಡಿಕೊಂಡು ಶಾಲೆ ಮುಗಿದ ಅನಂತರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಈ ಚರ್ಚೆ ಹಾಗೂ ಸಂವಾದಗಳಿಂದ ತಮ್ಮ ಸಾಮರ್ಥ್ಯ ಮತ್ತಷ್ಟು ಹೆಚ್ಚಿತು ಎಂದು ಅವರು ಹೇಳುತ್ತಾರೆ.

ಒಳ್ಳೆಯ ಕೆಲಸ ಮಾಡಿದವರಿಗೆ ಶಿಕ್ಷಣ ಇಲಾಖೆಯಲ್ಲಿ ಮನ್ನಣೆ ದೊರೆಯುವುದಕ್ಕೆ ಪರಿಶ್ರಮದೊಂದಿಗೆ ಅದೃಷ್ಟವೂ ಬೇಕು ಎಂಬ ಮಾತು ಇದೆ. ಮಧುಲಿಕಾ ಅವರು ಮೂಷಿಕ್‌ಸೌರ್‌ನಲ್ಲಿ ಮಾಡಿದ ಕೆಲಸವೇ ಅವರಿಗೆ ರಿಷಿವ್ಯಾಲಿ ತರಬೇತಿ ಕಾರ್ಯಕ್ರಮಕ್ಕೆ ಹೋಗಲು ಅವಕಾಶ ತಂದುಕೊಟ್ಟಿತು. ಈಗ ಗಮ್‌ದಿದ್‌ಗಾಂವ್‌ನ ಪ್ರಾಥಮಿಕ ಶಾಲೆಯ ಮಕ್ಕಳು ಉತ್ತಮ ಶಿಕ್ಷಣವನ್ನು ಪಡೆಯುತ್ತಿದ್ದಾರೆಂಬ ಹೆಸರನ್ನು ಅವರು ತಂದುಕೊಡುತ್ತಿದ್ದಾರೆ. ಆ ಶಾಲೆಯಲ್ಲಿ ಮಧುಲಿಕಾ ಅವರು ಸಹೋದ್ಯೋಗಿ ಪವಿತ್ರಾ ಜೊತೆಗೆ ಮಾಡುತ್ತಿರುವ ಕೆಲಸಗಳನ್ನು ಸ್ವತಃ ನೋಡಿ ತಿಳಿಯಲು ಉಪಸಹಾಯಕ ಬ್ಲಾಕ್ ಶಿಕ್ಷಣಾಧಿಕಾರಿ ಗಮ್‌ದಿದ್‌ಗಾಂವ್‌ಗೆ ಬಂದಿದ್ದಾರೆ. ಆ ಶಾಲೆಗೆ ಹಿಂದೆಂದೂ ಯಾವ ಶಿಕ್ಷಣಾಧಿಕಾರಿಯೂ ಭೇಟಿ ನೀಡಿರಲಿಲ್ಲವಾದ್ದರಿಂದ ಆ ಘಟನೆ ಆ ಕುಗ್ರಾಮದ ಜನರಿಗೆ ಎಂದೂ ಮರೆಯಲಾಗದ ವಿಷಯವಾಗಿ ಪರಿಣಮಿಸಿತು.